ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE-ADMI0SCH2/1/2023

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ, ಬೆಂಗಳೂರು - 560 001.
ದಿನಾಂಕ: 15-02-2023.

-:: ಸುತ್ತೋಲೆ ::-

**ವಿಷಯ :** ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ **e-rupee** ವ್ಯವಸ್ಥೆಯನ್ನು ಅಳವಡಿರುವ ಸಂಬಂಧ, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಮತ್ತು ವಿದ್ಯಾರ್ಥಿನಿಲಯಗಳ ಬ್ಯಾಂಕ್ ಖಾತೆ VPA (Virtual Payment Address)ಯನ್ನು ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಲು ಬಗ್ಗೆ.

**ಉಲ್ಲೇಖ :** ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಕಇ/ಇಡಿ03/ವಿ,ವೇತನ ಕೋಶ/ಸಿಆರ್/2022-23, ದಿನಾಂಕ: 10-02-2023.

**-0000000-**

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯ ವಿದ್ಯಾರ್ಥಿವೇತನ ತಾಂತ್ರಾಂಶದ ಮೂಲಕ ಮಂಜೂರು ಮಾಡಲಾಗುತ್ತಿದ್ದು, ಅದರಂತೆ 2022-23ನೇ ಸಾಲಿನಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಮಂಜೂರು ಮಾಡಲಾದ ವಿದ್ಯಾರ್ಥಿವೇತನದ ಮೊತ್ತವನ್ನು e-rupee ಮುಖಾಂತರ ಪಾವತಿ ಮಾಡಲು ಸಮಾಜ ಕಲ್ಯಾಣ ಇಲಾಖೆಯು ಕ್ರಮ ವಹಿಸಲಾಗಿರುತ್ತದೆ. e-Rupi ಮೂಲಕ Generate ಮಾಡಲಾದ Voucher ಅನ್ನು Redeem ಮಾಡಿಕೊಳ್ಳಲು ಈ ಕೆಳಕಂಡ ಬ್ಯಾಂಕುಗಳಲ್ಲಿ ಮಾತ್ರ VPA (Virtual Payment Address) ಲಭ್ಯವಿದ್ದು, ಪಾವತಿ ಮಾಡಲು ಅವಕಾಶವಿರುತ್ತದೆ.

| | | |
|---|---|---|
| 1. State Bank of India | 2. Canara Bank | 3. Bank of Baroda |
| 4. Axis Bank | 5. Indian Bank | 6. HDFC Bank |
| 7. ICICI Bank | 8. Punjab National Bank | 9. UCO Bank |

ಆದ್ದರಿಂದ ಮೇಲೆ ತಿಳಿಸಿರುವ ಬ್ಯಾಂಕುಗಳ ಶಾಖೆಗಳಲ್ಲಿ ಖಾತೆಯನ್ನು ಹೊಂದಿರುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರು ಸಂಸ್ಥೆಯ ಬ್ಯಾಂಕಿನ ನಿಖರವಾದ **VPA (Virtual Payment Address)**ಅನ್ನು ಪಡೆದು, Branch Manager (Bank) ಮತ್ತು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಜಂಟಿ ಸಹಿಯೊಂದಿಗೆ **VPA ID** ಯನ್ನು ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕಡ್ಡಾಯವಾಗಿ ಈ ಕೂಡಲೇ ಸಲ್ಲಿಸಲು ಈ ಮೂಲಕ ತಿಳಿಯಪಡಿಸಿದೆ.

ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ

**ನಿರ್ದೇಶಕರು**
**ತಾಂತ್ರಿಕ ಇಲಾಖೆ ಇಲಾಖೆ,**
**ಬೆಂಗಳೂರು.**

**ಇವರಿಗೆ :-**

1. **ಪ್ರಾಂಶುಪಾಲರುಗಳು** - ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ - ಸೂಕ್ತ ಕ್ರಮಕ್ಕಾಗಿ.
2. **ಇ-ಆಡಳಿತ ವಿಭಾಗಕ್ಕೆ** - ಇಲಾಖಾ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸುವುದು.